International Journal of Kannada Research
www.kannadajournal.com

ISSN: 2454–5813
IJKR 2019; 5(3): 10-12
© 2019 IJKR
www.kannadajournal.com
Received: 07-05-2019
Accepted: 10-06-2019

**ಮಮತಾ ಮನ್ವಾಚಾರ್**
ಸಂಶೋಧನಾ ವಿದ್ಯಾರ್ಥಿನಿ
ಸಂಗೀತ ವಿಭಾಗ ಕನ್ನಡ
ವಿಶ್ವವಿದ್ಯಾಲಯ, ಹಂಪಿ

**Correspondence**
**ಮಮತಾ ಮನ್ವಾಚಾರ್**
ಸಂಶೋಧನಾ ವಿದ್ಯಾರ್ಥಿನಿ
ಸಂಗೀತ ವಿಭಾಗ ಕನ್ನಡ
ವಿಶ್ವವಿದ್ಯಾಲಯ, ಹಂಪಿ

# ಶ್ರೇಷ್ಠ: ಕನಿಷ್ಠ ಭಾವಗಳ ಮುಖಾ–ಮುಖಿ

**ಮಮತಾ ಮನ್ವಾಚಾರ್**

ಲಲಿತ ಕಲೆಯ ಯಾವುದೇ ಪ್ರಕಾರಗಳು ಅಭಿವ್ಯಕ್ತಿಯ ಮಾಧ್ಯಮವಾಗಿ ಹೊರ ಹೊಮ್ಮಿವೆ ಎಂದೇ ತಿಳಿಯಬಹುದಾಗಿದೆ, ಮತ್ತು ಕಲೆಗಳು ಮನುಷ್ಯರ ಅನುಭವದ ಅತ್ಯುತ್ತಮ ಅಭಿವ್ಯಕ್ತಿಗಳಾಗಿವೆ. ಅದರಲ್ಲೂ ಸಂಗೀತಶಾಸ್ತ್ರದ ಅನೇಕ ಪ್ರಕಾರಗಳಲ್ಲಿ ಆಯಾ ಕಲಾ ಪ್ರಕಾರಗಳು ಅಭಿವ್ಯಕ್ತಿಯ ಅವಶ್ಯಕತೆಗಳನ್ನು ಅನುಭವಿಸಲೆಂದೇ ಜನ್ಮತಾಳಿವೆ ಎನಿಸುತ್ತದೆ. ಭಾರತೀಯ ಸಂಗೀತವು ಪ್ರಾರಂಭದಲ್ಲಿ ಒಂದೇ ಪ್ರಕಾರದಲ್ಲಿದ್ದದ್ದು ನಂತರದ ದಿನಗಳಲ್ಲಿ ಅನೇಕ ರೂಪಗಳನ್ನು ಹೊಂದುತ್ತಾ ಬದಲಾವಣೆ, ಸ್ಥಿತ್ಯಂತರಗಳನ್ನು ಹೊಂದಿದ್ದನ್ನು ಇತಿಹಾಸದ ಓದಿನ ಮೂಲಕ ಗ್ರಹಿಸುತ್ತಾ ಬಂದಿದ್ದೇವೆ. ಈ ಕಾರಣಗಳಿಂದ ಯಾವುದೇ ತೆರನಾದ ಸಂಗೀತ ಪ್ರಕಾರಗಳೂ ಒಂದೇ ಆಗಿದ್ದು ಇವುಗಳ ಮಧ್ಯೆ ಭೇಧ ಭಾವದ ರೇಖೆಯನ್ನು ತರುವುದು ಬೇಡ ಎನ್ನಬಹುದು.

ಸಂಗೀತಶಾಸ್ತ್ರತಜ್ಞರಲ್ಲಿ ಕೆಲವರು ಇದನ್ನು ಒಪ್ಪಿ ಕೊಳ್ಳುತ್ತಾರೆ, ಇನ್ನೂ ಕೆಲವರು ಒಪ್ಪಿಕೊಳ್ಳುವುದಿಲ್ಲ. ಶಾಸ್ತ್ರಗಳ ಬಗ್ಗೆ ಒಂದಷ್ಟು ತಿಳಿದುಕೊಂಡಿರುವವರು ಎಲ್ಲಾ ಶಾಸ್ತ್ರ ಪ್ರಕಾರಗಳಲ್ಲೂ ಶ್ರೇಷ್ಠ ಮತ್ತು ಕನಿಷ್ಠ ಎಂದು ವಿಂಗಡಿಸುತ್ತಾರೆ, ವಾದಮಾಡುತ್ತಾರೆ. ಇಪ್ಪತೊಂದನೆ ಶತಮಾನದಲ್ಲಿರುವ ನಾವು ಎಲ್ಲವೂ ಸಮಾನ, ಎಲ್ಲರೂ ಸಮಾನ ಎಂದು ಹೇಳತ್ತಾ ಬೀಗಿದರೂ ಆಚರಣೆಯಲ್ಲಿ, ಆಚರಿಸುವುದರಲ್ಲಿ ಹಾಗೆ ನಡೆದುಕೊಳ್ಳುವುದಿಲ್ಲ ನಿಜವಾಗಲೂ ನಾವು ಹೇಳಿದಂತೆ ನಡೆದುಕೊಳ್ಳುತ್ತಿದ್ದೇವಾ ಎಂದು ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳುವ ಕಾಲ ಘಟ್ಟದಲ್ಲಿದ್ದೇವೆ (ಹೇಳುವುದು ಒಂದು ಮಾಡುವುದು ಇನ್ನೊಂದು, ಆಚರಣೆಗೆ ಶಾಸ್ತ್ರ, ತಿನ್ನೋದು ಬದನೆಕಾಯಿ ಎಂಬ ಮಾತುಗಳನ್ನಿಲ್ಲಿ ಉದಾಹರಿಸಬಹುದು). ಈ ರೀತಿಯ ಕೆಲವೊಂದು ನಂಬಿಕೆಗಳ್ಳನ್ನು ಆಚರಣೆಯಲ್ಲಿ ಉಳಿಸಿಕೊಳ್ಳಲು, ಬಳಕೆಮಾಡಿಕೊಳ್ಳಲು ಸಣ್ಣ ಸಣ್ಣ ಪ್ರಯತ್ನವನ್ನೂ ಮಾಡುತ್ತಿರುತ್ತೇವೆ. ಹಾಗೆಯೇ ಸೋಲನ್ನೂ ಅನುಭವಿಸುತ್ತಿರುತ್ತೇವೆ.

ಇಂತಹ ನಂಬಿಕೆಗಳಿಗೆ ಮೋಸವಾದಾಗ ತಕ್ಷಣಕ್ಕೆ ವಿರೋಧಿಸುವ ಮೂಲಕ, ಅಲ್ಲಗಳೆಯುವ ಮೂಲಕ, ಕೊರಗುವ ಮೂಲಕ, ಪ್ರತಿರೋಧವನ್ನು ಒಡ್ಡುವ ಮೂಲಕ ಸಣ್ಣದಾಗಿ ಸಿಡಿದೇಳುತ್ತೇವೆ. ಅತಿಭಾವುಕರಿಗೆ, ಪ್ರಾಮಾಣಿಕವಾಗಿ ನಡೆದುಕೊಳ್ಳುವವರಿಗೆ ಇಂತಹ ಮಾತುಗಳು ಹೆಚ್ಚು ಅನ್ವಯವಾಗುತ್ತವೆ.

ಪ್ರತಿಯೊಂದು ಲಲಿತಕಲಾ ಪ್ರಕಾರಗಳೂ ಒಂದಕ್ಕಿಂತ ಇನ್ನೊಂದು ಭಿನ್ನವಾಗಿರುತ್ತವೆ. ಸಂಗೀತಶಾಸ್ತ್ರ ಪ್ರಕಾರಗಳಿಗೆ ಸಂಬಂಧಿಸಿದ ವಿಷಯಗಳಲ್ಲೂ ಈ ರೀತಿಯ ಭಿನ್ನತೆಯನ್ನು ಕಾಣುತ್ತೇವೆ, ಮತ್ತು ಪ್ರತಿಯೊಂದು ಪ್ರಕಾರಗಳೂ ತನ್ನದೇ ಆದಂತಹ ಲಕ್ಷಣಗಳನ್ನು, ನಿಯಮಗಳನ್ನೂ ಕಟ್ಟುಪಾಡುಗಳನ್ನು, ಶಾಸ್ತ್ರಸಂಬಂಧೀ ಸೂತ್ರಗಳನ್ನು ಹೊಂದಿರುತ್ತವೆ.

ಶಾಸ್ತ್ರೀಯ ಸಂಗೀತ ಪ್ರಕಾರಗಳಲ್ಲಿ ಖ್ಯಾಲ್, ದೃಪದ್, ಠುಮ್ರಿ ತರಾನ, ದಮಾರ್, ಟಪ್ಪಾ (ಇವು ಉತ್ತರಾದಿ ಸಂಗೀತವೆಂದು ಕರೆಸಿಕೊಂಡಿರುವ ಹಿಂದುಸ್ತಾನಿ ಸಂಗೀತಕ್ಕೆ ಸಂಬಂಧಿಸಿವೆ) ಇನ್ನೂ ಮುಂತಾದವುಗಳಲ್ಲಿ ಅವುಗಳದೇ ಆದಂತಹ ಶಾಸ್ತ್ರವನ್ನು ಪ್ರತಿಯೊಂದೂ ಅಳವಡಿಸಿಕೊಂಡಿರುತ್ತವೆ. ಕೆಲವೊಮ್ಮೆ ಇವುಗಳಲ್ಲೇ ಸಣ್ಣ ಪುಟ್ಟ ಸಾಮ್ಯತೆಗಳಿದ್ದೂ ಬೇರೆಯದೇ ತೆರನಾದ ಪ್ರಕಾರಗಳಾಗಿ ಪ್ರಚಾರವಾಗಿದ್ದು ತನ್ನದೇ ವಿಶಿಷ್ಟತೆಯನ್ನೂ ಹೊಂದಿರುತ್ತವೆ. ಶಾಸ್ತ್ರೀಯ ಅಂಶಗಳಿಗೆ ಹೆಚ್ಚು ಅನ್ವಯಿಸದ ಜನಪದ ಗೀತೆ, ಭಾವಗೀತೆ, ತತ್ವಪದ ಇಂತಹ ಅನೇಕ ಪ್ರಕಾರಗಳಿಗೂ ಇದು ಅನ್ವಯವಾಗುತ್ತದೆ.

ಕೆಲವರು ಶಾಸ್ತ್ರೀಯ ಸಂಗೀತವೇ ಶ್ರೇಷ್ಟವೆಂದು, ಕೆಲವರು ಲಘುಸಂಗೀತವೇ ಶ್ರೇಷ್ಟವೆಂದು ಹೇಳುವವರಿದ್ದಾರೆ, ಇಂತಹ ವಿಷಯಗಳಿಗೆ ಚರ್ಚೆಗಳು, ವಾದ–ವಿವಾದಗಳನ್ನು ಹಿಂದೆಯೂ, ಇಂದಿಗೂ ಕಾಣುತ್ತೇವೆ. ಇದು ಅವರವರ ಮನೋಧರ್ಮಕ್ಕೆ ಸಂಬಂಧಿಸಿದುದಾಗಿರುತ್ತದೆ. ಮತ್ತು ಅವರವರ ಅಭಿರುಚಿ, ತಿಳುವಳಿಕೆ, ಜ್ಞಾನದ ವಿಸ್ತಾರದಿಂದ ಇಂತಹ ಮಾತುಗಳು ಬಂದಿರುತ್ತವೆ.

ಸಂಗೀತ ಪ್ರಕಾರಗಳಲ್ಲಿ ಯಾವುದು ಸರಳ? ಯಾವುದು ಸಂಕೀರ್ಣ? ಎಂಬಂತಹ ಚರ್ಚೆಗಳ ನಡುವೆಯೇ ಇವುಗಳಲ್ಲಿ ಇರುವ ಸಮಾನ ಅಂಶಗಳು ಯಾವುವು? ಎಂದು ತಿಳಿಸುವ ಪ್ರಯತ್ನಗಳೂ ನಡೆದೇಯಿರುತ್ತವೆ. ಇದೇ ರೀತಿ ಸಂಗೀತ ಪ್ರಕಾರಗಳ ಗುಣಮಟ್ಟದಲ್ಲಿ, ಸಾಮರ್ಥ್ಯದಲ್ಲಿ ವ್ಯತ್ಯಾಸವನ್ನು ಆರೋಪಿಸಲಾಗುತ್ತದೆ. ಇವೆಲ್ಲಾ ಇದ್ದಾಗ್ಯೂ ಕೂಡ ಸಂಗೀತ ಪ್ರಕಾರಗಳ ಉದ್ದೇಶವು ಕೂಡ ಆನಂದ, ಮೋಕ್ಷ, ಮನರಂಜನೆ, ಸಂತೋಷ, ತೃಪ್ತಿ, ಸುಖ ಎಂಬ ಬೇರೆ ಬೇರೆ ಹಣೆಪಟ್ಟಿಗಳಿಂದ ತನ್ನನ್ನು ತಾನು ಗುರುತಿಸಿಕೊಳ್ಳುತ್ತದೆ. ಎಲ್ಲಾ ಸಂಗಿತ ಪ್ರಕಾರಗಳು ಆಯಾ ಕಾಲಮಾನದ ಮನಸ್ಥಿತಿಗಳಿಗೆ ಅವರವರ ಆಸೆ, ಅಭಿರುಚಿಗಳಿಗೆ ತಕ್ಕಂತೆ ಶಕ್ತಿಯ ಪೇಯವಾಗಿ, ಮುಲಾಮಾಗಿ ಕೆಲಸ ಮಾಡುತ್ತಾ ಬಂದಿದೆ. ಈ ಕಾರಣಗಳಿಂದ ಸಂಗೀತದ ಪ್ರಕಾರಗಳಲ್ಲಿ ಭೇದಭಾವ ಬೇಡ, ಸಂಗೀತವು ಕೇವಲ ಸಂಗೀತ ಅಷ್ಟೇ ಎಂದೆನ್ನಬಹುದು.

ಯಾವ ಪ್ರಕಾರಗಳಲ್ಲಿ ನಿಯಮಗಳಿರುತ್ತವೆಯೋ ಅಲ್ಲಿ ಕ್ಲಿಷ್ಟತೆಯೂ, ಸಂಕೀರ್ಣತೆಯೇ ಹೆಚ್ಚಾಗಿರುತ್ತದೆ. ಸರಳವಾಗಿರುವುದನ್ನು ಎಲ್ಲರೂ ಸುಲಭವಾಗಿಯೇ, ಹೆಚ್ಚು ಪರಿಶ್ರಮದ ಅವಶ್ಯಕತೆಯಿಲ್ಲದೆಯೇ ದಕ್ಕಿಸಿಕೊಳ್ಳಬಹುದು. ಇದಕ್ಕೆ ಸಣ್ಣದಾದ ಸಾಮಾನ್ಯ ಪ್ರಯತ್ನ ಸಾಕಷ್ಟೆ. ಯಾವುದೇ ವಿಷಯಗಳು ಶಾಸ್ತ್ರೀಯ ಚೌಕಟ್ಟಿನಲ್ಲಿದ್ದಾಗ ಜನಸಾಮಾನ್ಯರಿಗೆ ದೊರೆಯುವುದು ಕಷ್ಟಸಾಧ್ಯ. ಇವುಗಳು ಕಠಿಣಶ್ರಮವನ್ನು ಬೇಡುತ್ತವೆ, ಮತ್ತು ಎಲ್ಲರಿಗೂ ದಕ್ಕುವುದಿಲ್ಲ. ಈ ರೀತಿಯ ನಿಯಮವು ಒಂದು ಸಾಮಾನ್ಯ ಅಡುಗೆ, ಚಿತ್ತಾರ, ನೃತ್ಯ, ಸಂಗೀತ ಎಲ್ಲಕ್ಕೂ ಅನ್ವಯಿಸುತ್ತದೆ. ಸತತ ಅಭ್ಯಾಸವಿಲ್ಲದಿದ್ದರೆ ಸರಳಿಗಳನ್ನು ಪ್ರಾರಂಭಿಕರಾಗಗಳನ್ನೂ ಅಷ್ಟೇ ಏಕೆ ಷಡ್ಜವನ್ನು ಮುಟ್ಟಲೂ ಅಸಾಧ್ಯ.

ಅನೇಕ ದಿನಗಳವರೆಗೆ ಉಪ್ಪಿಟ್ಟನ್ನು ಮಾಡದವರಿಗೆ ಯಾವತ್ತೋ ಒಂದು ದಿನ ಮಾಡುವಾಗ ಇಂತಿಷ್ಟೇ ರವೆಗೆ ಇಷ್ಟೇ ಪ್ರಮಾಣದ ನೀರು ಬೇಕೆಂಬುದೇ ಮರೆತು ಹೋಗಿರುತ್ತದೆ. ಇದು ಹೇಗೋ ಮಾಡಿದರಾಯ್ತು ಎಂದು ಭಾವಿಸುವವರಿಗೆ ಅನ್ವಯಿಸುವುದಿಲ್ಲ, ಎಲ್ಲದರಲ್ಲೂ ಪರ್ಫೆಕ್ಟ್ ಬಯಸುವವರಿಗೆ ಹೆಚ್ಚು ಅನ್ವಯವಾಗುತ್ತದೆ.

ಸಂಗೀತಕ್ಕೆ ಸಂಬಂಧಿಸಿದಂತೆ ಎಲ್ಲಕ್ಕೂ ಅದರದೇ ನಿಯಮ ವ್ಯವಸ್ಥೆಗಳಿರುತ್ತವೆ. ಸಂಸ್ಕೃತಿ ಮತ್ತು ನಾಗರೀಕತೆಗಳ ನೆಲೆಯಲ್ಲಿ ವಿವಿಧ ಹಂತಗಳನ್ನು ಮೀರಿಬಂದಿರುವ ಸ್ಪಷ್ಟ ಕುರುಹುಗಳು ಇಂದಿಗೂ ನಮ್ಮೊಂದಿಗಿವೆ. ಸಂಗೀತವೂ ಕೂಡ ವಿಕಾಸದ ಹಾದಿಯಲ್ಲೇ ಮುನ್ನಡೆಯುತ್ತಿದೆ, ಒಂದೊಂದು ಕಾಲಘಟ್ಟದಲ್ಲೂ ತನ್ನದೇ ಆದ ಚಹರೆಗಳೊಂದಿಗೆ ಬದಲಾವಣೆಗಳ ಗತಿಯನ್ನೇ ಬದಲಾಯಿಸಿದೆ. ಹಿಂದಿನ ಕಾಲದಲ್ಲಿ ಕೇವಲ ಕೆಲವರ ವಶದಲ್ಲಿದ್ದ ಸಂಗೀತದ ಪ್ರಕಾರಗಳು ಇಂದು ಅಭ್ಯಾಸ ಮಾಡುವವರ, ಪ್ರಯತ್ನಿಸುವವರ ಕೈವಶವಾಗುತ್ತಿದೆ. ಕೆಲವೊಮ್ಮೆ ಇದಕ್ಕೆ ಅಪವಾದವೆಂಬಂತೆ ಉಳ್ಳವರ, ಪ್ರಭಾವಿಗಳ ಸ್ವತ್ತೂ ಆಗಿರುವುದುಂಟು.

ಶಾಸ್ತ್ರೀಯ ಸಂಗೀತಗಾರರು ಜನಪದ ಕನಿಷ್ಟ ಎಂದು ಭಾವಿಸಿದಂತೆ ಜನಪದ ಗೀತೆಗಳನ್ನು ಹಾಡುವವರು ಶಾಸ್ತ್ರೀಯ ಸಂಗೀತವು ತುಂಬಾ ಕಠಿಣ ಎಂದು ಹೇಳಿದಂತಾಗುತ್ತದೆ. ಹಾಗೆ ನೋಡಿದರೆ ಸಂಗೀತಗಾರರು ಯಾವುದೇ ಒಂದು ಪ್ರಕಾರಕ್ಕೆ ಕಟ್ಟುಬಿದ್ದು ಸಾಧನೆಯನ್ನು ಮಾಡಿದಾಗ ಅದರಲ್ಲಿ ಪ್ರೌಢಿಮೆ ಮತ್ತು ಹಿಡಿತವನ್ನು ಸಾಧಿಸಬಹುದು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಕೇವಲ ಒಂದೇ ಪ್ರಕಾರದ ಸಂಗೀತಕ್ಕೆ ನಮ್ಮನ್ನು ಕಟ್ಟಿಕೊಳ್ಳದೆ ಹಲವು ಸಂಗೀತ ಪ್ರಕಾರಗಳನ್ನು ಕಲಿಯುವ ಅವಶ್ಯಕತೆಯಿದೆ.

ಒಂದು ಅಂಗಡಿ ಎಂದರೆ ಅಲ್ಲಿ ಎಲ್ಲಾ ರೀತಿಯ ವಸ್ತುಗಳೂ ಇರಬೇಕು. ಇಲ್ಲಿ ಅಂಗಡಿ ಎಂಬುದನ್ನು ಕೇವಲವಾಗಿ ಪರಿಗಣಿಸದಿರಲು ಮನವಿ ಮಾಡುವೆನು ಮತ್ತು ಒಂದು ಅಡುಗೆ ಮನೆಗೆ ಹೋಲಿಸಿದಾಗ ಅಡುಗೆ ಮನೆಯಲ್ಲಿ ಎಲ್ಲಾ ಪದಾರ್ಥಗಳನ್ನೂ ಶೇಖರಿಸಿಟ್ಟುಕೊಂಡಿದ್ದಾಗ ನಮಗೆ ಬೇಕಾಗಿರುವ ಅಡುಗೆಯನ್ನೂ ಮಾಡಿಕೊಳ್ಳುವ ಕಲೆ ಗೊತ್ತಿರಬೇಕು. ಇಲ್ಲೂ ಕೂಡ ಅಡುಗೆ ಮನೆಯನ್ನು ಕೇವಲವಾಗಿ ನೋಡಬೇಡಿ ಅಡುಗೆ ಮನೆ ಸಾಹಿತ್ಯ ಎಂಬುದಕ್ಕೆ ನನ್ನ ವಿರೋಧವಿದೆ. ನಮ್ಮ ಆರೋಗ್ಯದ ಮೂಲವೇ ಅಡುಗೆ, ಅಡುಗೆ ಮನೆ. (ಆರೋಗ್ಯವೇ ಭಾಗ್ಯ, ಊಟ ಬಲ್ಲವನಿಗೆ ರೋಗವಿಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಂಡು) ಯಾವ ಅಡುಗೆಗೆ ಎಷ್ಟನ್ನು, ಯಾವುದನ್ನು ಹಾಕಬೇಕೆಂಬ ಜ್ಞಾನವಿದ್ದಾಗ ರುಚಿಯಾದ ಅಡುಗೆ ಮಾಡಲು ಸಾಧ್ಯ. ನಾನು ಮಹಿಳೆಯಾಗಿರುವುದರಿಂದ, ಎರಡು ದಶಕಗಳಿಗೂ ದೀರ್ಘವಾದ ಅಡುಗೆ ಮನೆಯ ಅನುಭವದ ಹಿನ್ನೆಲೆಯಲ್ಲಿ ಅಡುಗೆ, ಅಡುಗೆ ಮನೆಯ ಉದಾಹರಣೆಗಳು ಬರುತ್ತವೆ, ಸಹಿಸಿಕೊಳ್ಳಿ ನನ್ನ ದೃಷ್ಟಿಯಲ್ಲಿ ಉಪ್ಪಿಟ್ಟೂ ಶ್ರೇಷ್ಟ, ಹೋಳಿಗೆಯೂ ಶ್ರೇಷ್ಟ, ಎಲ್ಲವೂ ಸಮಾನ.

ಶಾಸ್ತ್ರೀಯ ಸಂಗೀತವನ್ನು ಕಲಿಯುವುದು, ಕಲಿಸುವುದು ಸಮಾಜದ ಆಯ್ದ ಕೆಲವರ ಸ್ವತ್ತಾಗಿದ್ದದ್ದು ಇತ್ತೀಚೆಗೆ ಇಂತಹ ಕಟ್ಟುಪಾಡುಗಳು ಇಲ್ಲವಾದರೂ ಆಯಾ ಸಂಗೀತ ಪ್ರಕಾರಗಳಿಗೆ ಲಗತ್ತಾಗಿರುವ ಮಾನ್ಯತೆ, ಶ್ರೇಷ್ಟತೆಯ ಮಾನದಂಡಗಳು ಇನ್ನೂ ಅಲ್ಲಲ್ಲಿ ಉಳಿದುಕೊಂಡೆ ಬಂದಿದ್ದು ಅವುಗಳ ಪಳೆಯುಳಿಕೆಗಳನ್ನು ಈಗಲೂ ಕಾಣಬಹುದು. ಸಂಗೀತಗಾರರು ತಮ್ಮ ಸಂಗೀತ ಪ್ರಕಾರವೇ ಶ್ರೇಷ್ಟ ಎಂದು ವಾದಮಾಡುವುದುಂಟು. ಹೀಗೆ ವಾದ ಮಾಡಲು ಸಂಗೀತ ತಜ್ಞರು ನೀಡುವ ಕಾರಣಗಳಲ್ಲಿಯೂ ವೈವಿಧ್ಯತೆಯಿದೆ. ತಮ್ಮ ಸಂಗೀತವೇ ಅತೀ ಪ್ರಾಚೀನವಾದುದು ಎಂದು ಹೇಳಿದರೆ ಇನ್ನೂ ಕೆಲವರು ತಮ್ಮ ಸಂಗೀತ ಪ್ರಕಾರವೇ ಹೆಚ್ಚು ನಿಯಮಗಳನ್ನು ಹೊಂದಿದೆಯೆಂದು, ನಿಯಮಬದ್ಧವಾಗಿದೆ ಎಂದು ವಾದ ಮಾಡುತ್ತಾರೆ. ಮತ್ತೆ ಕೆಲವರು ಅವರ ಸಂಗೀತ ಪ್ರಕಾರವು ಕೇಳಲು ಇಂಪಾಗಿರುತ್ತದೆನ್ನಿಸಿದರೆ ಕೆಲವರಿಗೆ ಅವರ ಸಂಗೀತ ಪ್ರಕಾರವನ್ನು ಹಾಡಲು ಸರಳ, ಸುಲಭವಾಗಿರುವುದೇ ಅದರ ಶ್ರೇಷ್ಟತೆಗೆ ಕಾರಣವಾಗಿ ತೋರುತ್ತದೆ.

ಇನ್ನೂ ಕೆಲವರಿಗೆ ಅವರ ಸಂಗೀತದ ಸೌಂದರ್ಯ, ಆಲಾಪ, ಅಲಂಕಾರ, ಸಾಹಿತ್ಯದ ವಿಷಯವೇ ಆ ಸಂಗೀತದ ಶ್ರೇಷ್ಟತೆಗೆ ಕಾರಣ ಎಂದು ಭಾವಿಸುತ್ತಾರೆ. ಈ ಎಲ್ಲಾ ಅಭಿಪ್ರಾಯಗಳೂ ಆಯಾ ಸಂಗೀತಗಾರರ ನಂಬಿಕೆಗಳ ಆಧಾರದಲ್ಲಿ ಗಟ್ಟಿಯಾಗಿರುತ್ತವೆ. ಆದರೆ ಈ ಯಾವುದೇ ಒಂದು ಲಕ್ಷಣದಿಂದ ಆ ಒಂದು ಸಂಗೀತ ಪ್ರಕಾರಕ್ಕೆ ಭಿನ್ನತೆಯನ್ನು ತಂದು ಕೊಡಬಹುದೇ ಹೊರತು ಶ್ರೇಷ್ಟತೆಯನ್ನು ತಂದು ಕೊಡುವುದಿಲ್ಲ. ಹಿಂದುಸ್ತಾನಿ ಸಂಗೀತದಲ್ಲಿ ಶೃಂಗಾರರಸವು ಕೃಷ್ಣ ಮತ್ತು ರಾಧೆಯರ ಸರಸ–ಸಲ್ಲಾಪಗಳು, ಆತ್ಮ–ಪರಮಾತ್ಮ, ಸತಿ–ಪತಿ ಭಾವದಲ್ಲಿ ಲೀನವಾಗುತ್ತದೆ. ಕರ್ನಾಟಕ ಸಂಗೀತದಲ್ಲಿ ಭಕ್ತಿ ಪ್ರಧಾನವಾದ ಸಾಹಿತ್ಯವನ್ನು ಹೇರಳವಾಗಿ ಕಾಣಬಹುದು.

ಸಂಗೀತದಲ್ಲಿ ಮೇಲು–ಕೀಳು ಎಂಬಂತಹ ಅಭಿಪ್ರಾಯಗಳು ಸಾಮಾಜಿಕ, ರಾಜಕೀಯದೊಳಗಿನ ರಾಜಕೀಯ ಕಾರಣಗಳ ಪರಿಣಾಮಗಳಷ್ಟೇ ಆಗಿವೆ. ಸಂಗೀತ ಪರಂಪರೆಯಲ್ಲಿ ಅವರವರ ಅನುಭವಗಳ ಆಯಾ ಸಂಗೀತ ಪ್ರಕಾರದ ಮೇಲೆ ಪರಿಣಾಮ ಬೀರುತ್ತವೆ. ಪ್ರಬಲವಾದ ಅಧಿಕಾರದ ವರ್ಗಗಳಿಗೆ ಆಯಾ ಸಂಗೀತದ ಪ್ರಥಮ ಪಟ್ಟಿಯು ಕಟ್ಟಿಟ್ಟ ಬುತ್ತಿಯೇ ಆಗಿರುತ್ತದೆ. ಅನೇಕ ರೀತಿಯಲ್ಲಿ ಸಂಗೀತ ಪ್ರಯೋಗವಾಗಿ ಮುಂದುವರೆಯುತ್ತದೆ. ಬೇರೆ ಬೇರೆ ಪರಿಣಾಮಗಳಲ್ಲಿ ಅಧಿಕಾರದ ಹಸ್ತಾಂತರವಾದಾಗ ಮತ್ತೊಂದು ಪ್ರಕಾರದ ಸಂಗೀತಕ್ಕೆ ಪ್ರಾಶಸ್ತ್ಯ ದೊರೆಯುತ್ತದೆ.

ಭಾರತೀಯ ಸಂಗೀತದ ಚರಿತ್ರೆಯಲ್ಲಿನ ಪಲ್ಲಟಗಳನ್ನು ಗಮನಿಸಿದಾಗ ಆಯಾ ಸಂಗೀತ ಪ್ರಕಾರಗಳಿಗೆ ದೊರೆತ ಸ್ಥಾನಮಾನಗಳನ್ನು ನೋಡಿದಾಗ ಸಂಗೀತದ ಶ್ರೇಷ್ಠತೆಗೂ, ಆ ಸಂಗೀತಕ್ಕೆ ಸಿಕ್ಕಂತಹ ಉಪಚಾರಕ್ಕೂ ಸಾಮಾಜಿಕ, ರಾಜಕೀಯ ಅವಕಾಶಗಳಿಗೂ ನಂಟು ಪ್ರತ್ಯಕ್ಷವಾಗುತ್ತದೆ. ಇವುಗಳಿಂದ ಆಯಾ ಸಂಗೀತ ಪ್ರಕಾರಗಳು ಪಡೆದುಕೊಂಡು ಬಂದಿರುವ ಸ್ಥಾನ ಮಾನಗಳಿಗೆ ಆ ಸಂಗೀತದ ತಿರುಳುಗಳು ಕಾರಣವೇ ಅಲ್ಲ ಎನ್ನುವುದೂ ಸತ್ಯ.

ಹೀಗಾಗಿ ತಮ್ಮದೇ ಆದ ಗುಣಗಳಿಂದ ಕೆಲವು ಸಂಗೀತ ಪ್ರಕಾರಗಳು ಭಿನ್ನ ಎಂಬಂತಹ ಅವಕಾಶಗಳಿಂದ ಅನುಕೂಲಗಳನ್ನು ಪಡೆದುಕೊಂಡು ಇನ್ನುಳಿದ ಸಂಗೀತ ಪ್ರಕಾರಗಳಿಗಿಂತ ತಮ್ಮ ತಮ್ಮ ಸಂಗೀತ ಪ್ರಕಾರವೇ ಶ್ರೇಷ್ಠ ಎಂಬ ಜನ ಸಾಮಾನ್ಯರ ತಿಳುವಳಿಕೆಯ ಪುರಸ್ಕಾರ, ಗೌರವ, ಸ್ಥಾನ ಮಾನ, ಮನ್ನಣೆ, ಶ್ರೇಷ್ಠತೆ (?) ಎಂಬಂತಹ ಪದಗಳಿಂದ ಅಲಂಕಾರಗೊಂಡಿವೆ. ಆದಾಗ್ಯೂ ಇಂತಹ ಶ್ರೇಷ್ಠತೆಯನ್ನು ತೀರ್ಮಾನಿಸಲು, ಅನುಮೋದಿಸಲು ಸಂಗೀತ ಪ್ರಕಾರಗಳಲ್ಲಿ ಯಾವುದೇ ಮಾನದಂಡಗಳು ಇಲ್ಲದಿರುವುದು ಅಷ್ಟೇ ದಿಟ ಎನ್ನಬಹುದು.

ಹೀಗೆಲ್ಲಾ ಹೇಳಿಯೂ ಕೂಡ ಸಾಮಾಜಿಕವಾಗಿ ಒಂದಷ್ಟು ಬದಲಾವಣೆಗಳೊಂದಿಗೆ ಬೆಳವಣಿಗೆಯನ್ನು ಹೊಂದಿರುವ ಇಂದಿನ ದಿನಗಳಲ್ಲೂ ಪಿರಮಿಡ್ ಶ್ರೇಣಿಯ ವ್ಯವಸ್ಥೆಯೇ ಈಗಲೂ ಆಯಾ ಕ್ಷೇತ್ರದಲ್ಲಿರುವುದು ಅಷ್ಟೇ ಸತ್ಯ ಅನೇಕ ಸಂಘ ಸಂಸ್ಥೆಗಳು ಸಂಯೋಜಿಸುವ ಕಾರ್ಯಕ್ರಮಗಳಲ್ಲಿ ಶಾಸ್ತ್ರೀಯ ಸಂಗೀತಗಾರರಿಗೆ ಹಾಗೂ ಜನಪದ ಸಂಗೀತಗಾರರಿಗೆ ನೀಡುತ್ತಿರುವ ಸಂಘಟನೆಯ ಮೊತ್ತವನ್ನು ಗಮನಿಸಿದಾಗ ತುಂಬಾ ಅಂತರವಿರುವುದು ಕಂಡುಬರುತ್ತದೆ. ಜನಪದ ಕಲಾವಿದರ ಸ್ಥಿತಿಯು ಎರಡು ಮೂರು ದಶಕಗಳಲ್ಲಿ ಇದ್ದುದಕ್ಕಿಂತ ತೀರಾ ಭಿನ್ನವಾಗೇನೂ ಇಲ್ಲ. ಸರ್ಕಾರಿ ಸರ್ಕಾರೇತರ ಸಂಸ್ಥೆಗಳು ನಡೆಸುವ ಉತ್ಸವಗಳಲ್ಲೂ ಈ ತಾರತಮ್ಯ ಭಾವವೇ ಎದ್ದು ಕಾಣುತ್ತದೆ. ಕೇವಲ ಬಾಯಿ ಮಾತಿನಲ್ಲಷ್ಟೇ ಸಮಾನ ಎಂದು ನಾವೆಲ್ಲಾ ಹೇಳುತ್ತಿದ್ದೇವೆಯೇ ಹೊರತು ಎಲ್ಲಿಯೂ ಕಾರ್ಯರೂಪದಲ್ಲಿ ಪಾಲನೆ ಮಾಡುವಲ್ಲಿ ಎಡವುತ್ತಿದ್ದೇವೆ, ಮಾತಿಗೆ ತಪ್ಪುತ್ತಿದ್ದೇವೆ ಎಂದೇ ಹೇಳಬಹುದು.

ಈಗಲೂ ಕೆಲವೊಂದು ಮಠಗಳಲ್ಲಿ ಕೆಲವೇ ಪ್ರಕಾರದ ಸಂಗೀತಕ್ಕಷ್ಟೇ ಪ್ರಾಶಸ್ತ್ಯ ನೀಡಿರುವುದನ್ನು, ನೀಡುತ್ತಿರುವುದನ್ನೂ ಕಾಣಬಹುದು. ಇತ್ತೀಚೆಗೆ ಒಂದು ಮಠದಲ್ಲಿ ಕಾರ್ಯಕ್ರಮ ನೀಡಬೇಕೆಂದು ಆಹ್ವಾನ ನೀಡಿದವರು ಇಂಥದೇ ಪ್ರಕಾರವನ್ನು ಹಾಡಿ ಎಂದಾಗ ಪುರಂದರ, ಕನಕ, ಬಸವಣ್ಣ, ಅಲ್ಲಮ, ಅಕ್ಕಮಹಾದೇವಿಯನ್ನು ಕೇವಲ ಒಂದು ವರ್ಗದವರ ಐಕಾನ್ ಎಂದು ಕಟ್ಟಿಹಾಕಿರುವುದು ಎಷ್ಟು ಸರಿ ಎಂದೆನಿಸಿದದ್ದಂತೂ ನಿಜ.

**ಪರಾಮರ್ಶನ ಕೃತಿಗಳು**


1. ಸಾಹಿತ್ಯ ಮತ್ತು ಸಂಸ್ಕೃತಿ; ಎನ್. ಚಂದ್ರಶೇಖರ್, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
2. ಕನಕದಾಸರ ಕಾವ್ಯ ಮತ್ತು ಸಂಗೀತ; ಕೆ.ಎಸ್. ಪವಿತ್ರ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು.
3. ಕರ್ನಾಟಕ ವೈಭವ; ನೀಲಾ ಮಂಜುನಾಥ್, ಕರ್ನಾಟಕ ಸರ್ಕಾರ, ಬೆಂಗಳೂರು
4. ಕರ್ನಾಟಕ ಸಂಗೀತ ವಾಹಿನಿ; ರಾ. ಸತ್ಯನಾರಾಯಣ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
5. ಶತಮಾನದ ಶಕಪುರುಷ ಏಣಗಿ ಬಾಳಪ್ಪ; ಎ. ಶೇಖ(ಮಾಸ್ತರ) ಸಂ. ಗುಡಿಹಳ್ಳಿ ನಾಗರಾಜ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
6. ಅಂತರ್ಜಾಲ ಮಾಹಿತಿ.
7. ಸಂಗೀತ ಸರಸಿ: ಪ್ರಕಾಶ ಬುರ್ಡೆಯವರ ಸಂಗೀತಯಾನ, ಮುಂಬೈ